# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 56 (ಹಳೇ ವಾರ್ಡ್ ಸಂಖ್ಯೆ-75), 15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.

---

**ಸಂಖ್ಯೆ: ವಾ-56/ವಾ.ಸ./ಸಭಾನಡವಳಿ-12/2022-23** — **ದಿನಾಂಕ: 27/09/2022**

**-:ಸಭೆಯ ನಡವಳಿಗಳು:-**

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 17/09/2022 ಶನಿವಾರದಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್-56 (ಹಳೇ ವಾರ್ಡ್ ಸಂಖ್ಯೆ-75) ಶಂಕರಮಠದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಬೆನಕೇಶ್ ಆರ್. ವಾರ್ಡ್ ಸಮಿತಿಯ, ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಭಂಧಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೂತನ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಶ್ರೀ ಬೆನಕೇಶ್ ಆರ್. ರವರು ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷರಾದ ಮಾನ್ಯ ನೂತನ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಮಾನ್ಯ ವಲಯ ಆಯುಕ್ತರ ಆದೇಶ ಸಂಖ್ಯೆ-ಜಆ(ಪ)ಪಿಆರ್/14/2022-23 ದಿನಾಂಕ: 05.09.2022 ರಂತೆ ಶ್ರೀ.ಎಮ್.ಬಿ.ನಾಗರಾಜ್ ಆದ ನಾನು ಶಂಕರಮಠ ವಾರ್ಡ್ ಸಂಖ್ಯೆ 56 ಕ್ಕೆ ನೂತನವಾಗಿ ನೋಡೆಲ್ ಅಧಿಕಾರಿಯಾಗಿ ನೇಮಕಗೊಂಡಿರುವುದಾಗಿ ತಿಳಿಸುತ್ತಾ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸ್ಥಳೀಯ ನಾಗರಿಕರೊಂದಿಗೆ ತಮ್ಮ ಪರಿಚಯವನ್ನು ಸಭೆಯಲ್ಲಿ ಹೇಳಿಕೊಂಡರು.

**ಸಭೆಯಲ್ಲಿ ಹಾಜರಿದ್ದವರು:-**

| | |
|---|---|
| 1 | ಶ್ರೀ.ಎಮ್.ಬಿ.ನಾಗರಾಜ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್-56, ಬಿಬಿಎಂಪಿ |
| 2 | ಶ್ರೀ ಬೆನಕೇಶ್ ಆರ್. ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-56, ಬಿಬಿಎಂಪಿ |
| 3 | ಶ್ರೀ ಶಿವಕುಮಾರ್, ಸಹಾಯಕ ಅಭಿಯಂತರರು, ಎನ್‌ಡಬ್ಲ್ಯು-2 ಉಪವಿಭಾಗ, ಬಿಡಬ್ಲ್ಯುಎಸ್‌ಎಸ್‌ಬಿ. |
| 4 | ಶ್ರೀ ಲೋಕೇಶ್ ಎಸ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 5 | ಶ್ರೀ ಕೆ.ವಿ. ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ಮಹಾಲಕ್ಷ್ಮೀಪುರಂ ವಿಭಾಗ, ಬಿಬಿಎಂಪಿ. |
| 6 | ಶ್ರೀಮತಿ ಲತಾ ಟಿ ಎಸ್. ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ. |
| 7 | ಶ್ರೀ ಹೆಚ್. ರಮೇಶ್, ಕಿರಿಯ ಅಭಿಯಂತರರು, ಎನ್-7 ಉಪವಿಭಾಗ, ಬೆಸ್ಕಾಂ. |
| 8 | ಶ್ರೀ ಸಿದ್ದರಾಮೇಶ್ವರ್ ಆರ್.ಎಸ್., ಕಂದಾಯ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 9 | ಶ್ರೀ ನಿರಂಜನ್ ಎನ್. ಸಿ., ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 10 | ಶ್ರೀ ಮಂಜು ಸಿ, ವಾರ್ಡ್ ಮಾರ್ಷಲ್, ವಾರ್ಡ್-56, ಬಿಬಿಎಂಪಿ. |
| 11 | ಶ್ರೀ ಗಿರೀಶ್ ಬಿ, ಕಾಮಗಾರಿ ಪರಿವೀಕ್ಷಕರು, ಎನ್‌ಡಬ್ಲ್ಯು-2 ಉಪವಿಭಾಗ, ಬಿಡಬ್ಲ್ಯುಎಸ್‌ಎಸ್‌ಬಿ. |
| 12 | ಶ್ರೀ ಚನ್ನವೀರಯ್ಯ, ಹೆಡ್‌ಗ್ಯಾಂಗ್‌ಮೆನ್, ವಾರ್ಡ್-56, ಬಿಬಿಎಂಪಿ. |
| 13 | ಶ್ರೀಮತಿ ಲಲಿತ ಎನ್, ಪಿಹೆಚ್‌ಸಿ., ಆರೋಗ್ಯ ಕೇಂದ್ರ, ವಾರ್ಡ್-56, ಬಿಬಿಎಂಪಿ. |
| 14 | ಶ್ರೀಮತಿ ಹೇಮಲತಾ, ಪಿಹೆಚ್‌ಸಿ., ಆರೋಗ್ಯ ಕೇಂದ್ರ, ವಾರ್ಡ್-56, ಬಿಬಿಎಂಪಿ. |
| 15 | ಶ್ರೀ ಯೋಗೇಶ, ಎಎಸ್‌ಐ, ಬಸವೇಶ್ವರನಗರ ಪೊಲೀಸ್ ಠಾಣೆ. |
| 16 | ಶ್ರೀ ರಮೇಶ್ ಟಿ. ಎನ್., (ಹಸಿರುದಳ) ಒಣ ಕಸ ಸಂಗ್ರಹ ಕೇಂದ್ರ ಕೋಆರ್ಡಿನೇಟರ್, ವಾರ್ಡ್-56, ಬಿಬಿಎಂಪಿ. |
| 17 | ಶ್ರೀ ರಾಜೇಶ್ ವಿ., (ಹಸಿರುದಳ) ಒಣ ಕಸ ಸಂಗ್ರಹ ಕೇಂದ್ರ ಕೋಆರ್ಡಿನೇಟರ್, ವಾರ್ಡ್-56, ಬಿಬಿಎಂಪಿ. |

ಮು.ತಿ.ನೋ.

Scanned by CamScanner

| | |
|---|---|
| 18 | ಶ್ರೀ ಮನೋಜ್, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು, ವಿದ್ಯುತ್ ವಿಭಾಗ, ವಾರ್ಡ್-56, ಬಿಬಿಎಂಪಿ. |
| 19 | ಶ್ರೀ ಪುಟ್ಟಸ್ವಾಮಿ, ಉದ್ಯಾನವನಗಳ ನಿರ್ವಹಣೆ ಗುತ್ತಿಗೆದಾರರು, ತೋಟಗಾರಿಕೆ ವಿಭಾಗ, ವಾರ್ಡ್-56, ಬಿಬಿಎಂಪಿ. |
| 20 | ಶ್ರೀ ಸಿದ್ದರಾಜು ಸೋಸಲೆ, ವಾರ್ಡ್‌ನ ನಾಗರೀಕರು, ವಾರ್ಡ್-56. |
| 21 | ಶ್ರೀ ಆರ್. ಮಂಜುನಾಥ್, ವಾರ್ಡ್‌ನ ನಾಗರೀಕರು, ವಾರ್ಡ್-56. |
| 22 | ಶ್ರೀ ನಾಗರಾಜ್, ವಾರ್ಡ್‌ನ ನಾಗರೀಕರು, ವಾರ್ಡ್-56. |
| 23 | ಶ್ರೀ ಕೆ. ಗಣೇಶ್, ವಾರ್ಡ್‌ನ ನಾಗರೀಕರು, ವಾರ್ಡ್-56. |
| 24 | ಶ್ರೀ ಮುನೀರ್ ಪಾಷ, ವಾರ್ಡ್‌ನ ನಾಗರೀಕರು, ವಾರ್ಡ್-56. |
| 25 | ಶ್ರೀ ಬಿ. ಸಿ. ರವೀಶ್, ವಾರ್ಡ್‌ನ ನಾಗರೀಕರು, ವಾರ್ಡ್-56. |

<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-</u>

1. **ಆರೋಗ್ಯ ಇಲಾಖೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**
   - ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-56 ಶಂಕರಮಠದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳು ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
   - ಶ್ರೀಮತಿ ಲಲಿತ ಎನ್., ಪಿ.ಹೆಚ್.ಸಿ., ವಾರ್ಡ್-75, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ 01 ಸಂಖ್ಯೆ ಕೋವಿಡ್ ಕೇಸ್ ಪತ್ತೆಯಾಗಿದ್ದು, ಅವರನ್ನು ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ದಾಖಲಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

2. **ಅಭಿಯಂತರರ ವಿಭಾಗದ ಬಗ್ಗೆ:-**
   - ಶ್ರೀ ಮಂಜುನಾಥ್ ಆರ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಕೆಂಪೇಗೌಡ ಆಟದ ಮೈದಾನಕ್ಕೆ ಗೇಟ್ ಅಳವಡಿಸಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.
   - ಸಹಾಯಕ ಅಭಿಯಂತರರು, ವಾರ್ಡ್-56 ರವರು ಮಾತನಾಡುತ್ತಾ, ಕೆಂಪೇಗೌಡ ಆಟದ ಮೈದಾನಕ್ಕೆ ಗೇಟ್ ಅಳವಡಿಸುವ ಕಾಮಗಾರಿಯನ್ನು ನಗರೋತ್ಥಾನ ಪ್ಯಾಕೇಜ್ ಅನುದಾನದಡಿಯಲ್ಲಿ ತೆಗೆದುಕೊಳ್ಳಲಾಗಿದ್ದು, ಕೆಲಸದ ಆದೇಶ ದೊರೆತ ಕೂಡಲೇ ಸ್ಥಳ ಪರಿಶೀಲಿಸಿ ಜಾಗಕ್ಕೆ ಅನುಗುಣವಾಗಿ ತಾಂತ್ರಿಕವಾಗಿ ಗೇಟ್ ನಿರ್ಮಿಸಲು ಸೂಕ್ತ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.
   - ಶ್ರೀ ಗಣೇಶ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಲಾದ ಸಿಸಿ ಕ್ಯಾಮೆರಾಗಳು ಚಾಲ್ತಿಯಲ್ಲಿರುವುದಿಲ್ಲ ಎಂದು ಸಭೆಯಲ್ಲಿ ದೂರಿದರು.
   - ಸಹಾಯಕ ಅಭಿಯಂತರರು, ವಾರ್ಡ್-56 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿರುವ ಸಿಸಿ ಕ್ಯಾಮೆರಾಗಳ ನಿರ್ವಹಣೆ ಮಾಡಲು ನಗರೋತ್ಥಾನ ಪ್ಯಾಕೇಜ್ ಅನುದಾನದಡಿಯಲ್ಲಿ ತೆಗೆದುಕೊಳ್ಳಲಾಗಿದ್ದು, ಕೆಲಸದ ಆದೇಶ ದೊರೆತ ಕೂಡಲೇ ಸ್ಥಳ ಪರಿಶೀಲಿಸಿ ಕೆಲಸ ನಿರ್ವಹಿಸಲು ಸೂಕ್ತ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

3. **ಪಶುಪಾಲನೆ ವಿಭಾಗದ ಬಗ್ಗೆ:-**
   - ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಹೆಚ್ಚಾಗುತ್ತಿರುತ್ತವೆ, ಆದುದರಿಂದ ಬೀದಿ ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಳವಡಿಸಲು ಕ್ರಮವಹಿಸುವಂತೆ ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ತಿಳಿಸುವಂತೆ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

4. **ಕಂದಾಯ ವಿಭಾಗದ ಬಗ್ಗೆ:-**
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಎಂದಿನಂತೆ ವಾರ್ಡ್ ವ್ಯಾಪ್ತಿಯಲ್ಲಿ ಸಂಗ್ರಹವಾದ ಕಂದಾಯದ ಮೊತ್ತ ಹಾಗೂ ಕಂದಾಯ ಸಂಗ್ರಹಣೆಗಾಗಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡುವಂತೆ ಕಂದಾಯ ಪರಿವೀಕ್ಷಕರು ವಾರ್ಡ್-56 ರವರಿಗೆ ತಿಳಿಸಿದರು.

ಮು.ತಿ.ನೋ.

Scanned by CamScanner

- ಶ್ರೀ ಸಿದ್ದರಾಮೇಶ್ವರ್ ಆರ್.ಎಸ್., ಕಂದಾಯ ಪರಿವೀಕ್ಷಕರು, ವಾರ್ಡ್-56, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ಕಂದಾಯ ಸಂಗ್ರಹಣೆಯಾಗುತ್ತಿದ್ದು, 2022-23ನೇ ಸಾಲಿನಲ್ಲಿ 01-ಏಪ್ರಿಲ್-2022 ರಿಂದ ಇಲ್ಲಿಯವರೆಗೆ ಬಾಕಿ ಹಾಗೂ ಪ್ರಸ್ತುತ ಸಾಲಿನ ಒಟ್ಟು ಮೊತ್ತ ರೂ. 4.31 ಕೋಟಿಗಳಷ್ಟು ಕಂದಾಯ ಸಂಗ್ರಹವಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.

5. <u>ಅರಣ್ಯ ವಿಭಾಗದ ಬಗ್ಗೆ:-</u>

- ಶ್ರೀ ಬಿ. ಸಿ. ರವೀಶ್, ವಾರ್ಡ್‌ನ ನಾಗರೀಕರುರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಜೆ.ಸಿ.ನಗರದ 21ನೇ ಮುಖ್ಯರಸ್ತೆಯಲ್ಲಿ ಮರದ ರೆಂಬೆಗಳನ್ನು ಕತ್ತರಿಸಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.
- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಶೀಘ್ರವಾಗಿ ಸದರಿ ಸ್ಥಳವನ್ನು ಪರಿಶೀಲಿಸಿ ತೆರವುಗೊಳಿಸಲು ಸೂಕ್ತ ಕ್ರಮವಹಿಸಲು ಸಭೆಯಲ್ಲಿ ಹಾಜರಿದ್ದ ಅರಣ್ಯ ವಿಭಾಗದ ಮೇಸ್ತ್ರಿ ಶ್ರೀ ಮಲ್ಲಪ್ಪ ರವರಿಗೆ ತಿಳಿಸಿದರು.

6. <u>ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-</u>

- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಹೆಚ್ಚಾಗಿ ಕಸ ಬೀಳುವ ಜಾಗಗಳಲ್ಲಿ ಕಸ ಹಾಕದಂತೆ ತಡೆಯಲು ರಾತ್ರಿ ವೇಳೆಯಲ್ಲಿ ಮಾರ್ಷಲ್‌ಗಳೊಂದಿಗೆ ಪರಿವೀಕ್ಷಣೆ ಮಾಡುವುದು ಹಾಗೂ ಯಾವುದೇ ದೂರುಗಳು ಬಾರದಂತೆ ಕಸ ಸಂಗ್ರಹಣೆ ಮತ್ತು ಕಸ ವಿಲೇವಾರಿ ಆಟೋಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ನಿರಂಜನ್ ಎನ್. ಸಿ. ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

7. <u>ತೋಟಗಾರಿಕೆ ವಿಭಾಗದ ಬಗ್ಗೆ:-</u>

- ಶ್ರೀ ನಾಗರಾಜ್, ವಾರ್ಡ್‌ನ ನಾಗರೀಕರುರವರು ಮಾತನಾಡುತ್ತಾ, ಕಿರ್ಲೋಸ್ಕರ್ ಕಾಲೋನಿ 1ನೇ ಹಂತದಲ್ಲಿರುವ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿನ ಗಾರ್ಡನಿಂಗ್ ಅನ್ನು ಸ್ವಚ್ಛ ಮಾಡಿಕೊಡುವಂತೆ ಸಭೆಯಲ್ಲಿ ಕೋರಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಸದರಿ ಸ್ಥಳವನ್ನು ಪರಿಶೀಲಿಸಿ ಶೀಘ್ರವಾಗಿ ಸೂಕ್ತ ಕ್ರಮವಹಿಸಬೇಕಾಗಿ ಹಾಗೂ ವಾರ್ಡ್ ವ್ಯಾಪ್ತಿಯ ಉದ್ಯಾನವನಗಳನ್ನು ಸರಿಯಾಗಿ ಪರಿಶೀಲಿಸಿ ಯಾವುದೇ ದೂರುಗಳು ಬಾರದಂತೆ ನಿರ್ವಹಣೆ ಕೆಲಸವನ್ನು ನಿಬಾಯಿಸಲು ಕ್ರಮವಹಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಪುಟ್ಟಸ್ವಾಮಿ, ಉದ್ಯಾನವನಗಳ ನಿರ್ವಹಣೆ ಗುತ್ತಿಗೆದಾರರು ರವರಿಗೆ ಸಭೆಯಲ್ಲಿ ತಿಳಿಸಿದರು.

8. <u>ವಿದ್ಯುತ್ ವಿಭಾಗದ ಬಗ್ಗೆ:-</u>

- ಶ್ರೀ ಸಿದ್ದರಾಜು ಸೋಸಲೆ, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಕುರುಬರಹಳ್ಳಿಯ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳಿಗೆ ಸಂಭಂಧಿಸಿದಂತೆ ಯಾವುದೇ ದೂರುಗಳನ್ನು ಸರಿಯಾಗಿ ನಿಭಾಯಿಸುತ್ತಿರುವುದಿಲ್ಲ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬಿದಿ ದೀಪಗಳಿಗೆ ಸಂಭಂದಿಸಿದಂತೆ ಯಾವುದೇ ದೂರುಗಳು ಕಂಡುಬಂದಲ್ಲಿ ಶೀಘ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಮನೋಜ್, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು ರವರಿಗೆ ಸಭೆಯಲ್ಲಿ ತಿಳಿಸಿದರು.

9. <u>ಬೆಸ್ಕಾಂ ವಿಭಾಗದ ಬಗ್ಗೆ:-</u>

- ಶ್ರೀಮತಿ ಲತಾ, ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿರುವ ಕುಡಿಯುವ ನೀರಿನ ಘಟಕದ ವಿದ್ಯುತ್ ಸಂಪರ್ಕ ಅನಧೀಕೃತವಾಗಿರುತ್ತದೆ. ಇದನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಇದರ ಬಗ್ಗೆ ತಮ್ಮ ಇಲಾಖೆಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಾಗಪುರ ಉಪವಿಭಾಗ ರವರಿಗೆ ಪತ್ರದ ಮುಖೇನ ತಿಳಿಸಿದ್ದಲ್ಲಿ ಅನಧೀಕೃತ ವಿದ್ಯುತ್ ಪಡೆದಿರುವ ಕುಡಿಯುವ ನೀರಿನ ಘಟಕಗಳನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಪು.ತಿ.ನೋ.

Scanned by CamScanner

**10. ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-**

- ಶ್ರೀ ಆರ್ ಮಂಜುನಾಥ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಲಾವಣ್ಯ ಸ್ಟೋರ್ ಜಂಕ್ಷನ್ ಬಳಿಯಲ್ಲಿ ಮಳೆ ಜೋರಾಗಿ ಬಂದಾಗ ನೀರಿನ ರಭಸಕ್ಕೆ ಮ್ಯಾನ್‌ಹೋಲ್‌ಗಳ ಕವರಿಂಗ್ ಸ್ಲಾಬ್‌ಗಳು ಪಕ್ಕಕ್ಕೆ ಸರಿದುಹೋಗುತ್ತವೆ. ಇದರಿಂದಾಗಿ ಅನಾಹುತಗಳು ಉಂಟಾಗುವ ಸಂಭವವಿರುತ್ತದೆ ಎಂದು ತಿಳಿಸಿ, ಇದಕ್ಕೆ ಕಾರಣ ಕೆಲವು ಮನೆಯವರು ಮಳೆ ನೀರನ್ನು ಸಾನಿಟರಿ ಪೈಪ್‌ಲೈನ್‌ಗೆ ಸಂಪರ್ಕಿಸಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಸದರಿ ರಸ್ತೆಯಲ್ಲಿ ಮನೆಗಳಿಂದ ಬರುವ ಮಳೆ ನೀರನ್ನು ಸಾನಿಟರಿ ಪೈಪ್‌ಲೈನ್‌ನಲ್ಲಿ ಬಿಡುತ್ತಿರುವುದನ್ನು ಪರಿವೀಕ್ಷಿಸಿ ಅಂತಹ ಮನೆಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ನೋಟೀಸ್ ಜಾರಿ ಮಾಡಲು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಪ್ರತೀ ಸಭೆಯ ಸಭಾ ನಡವಳಿಗಳನ್ನು ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿರವರಿಗೆ ಸೂಚಿಸಿದರು. ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾ ನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು, ಸದರಿ ದೂರುಗಳ ಬಗ್ಗೆ ಕ್ರಮವಹಿಸಿರುವ ಕುರಿತು ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ **ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ** ವರದಿ ಮಾಡಲು ಹಾಗೂ **ವಾರ್ಡ್ ಕಮಿಟಿ ವಾರ್ಡ್-75 ವಾಟ್ಸ್ ಆಪ್ ಗ್ರೂಪ್** ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ನೋಡಲ್ ಅಧಿಕಾರಿರವರ ಅನುಮೋದನೆ ಮೇರೆಗೆ )

26/9/2022

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 75

**ಪ್ರತಿಯನ್ನು :-**

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Scanned by CamScanner